# ಅಧ್ಯಾತ್ಮ ಪ್ರಹಸನ



ಒಂದು ಸ್ವಾರಸ್ಯಕರವಾದ ಕತೆಯನ್ನು ಕೇಳಿ. ಒಬ್ಬ ಅರೇಬಿಯನ್ ಇದ್ದ. ಅವನು ಹತ್ತು ಒಂಟೆಗಳನ್ನು ನಡೆಸಿಕೊಂಡು ಹೋಗುತ್ತಿದ್ದ. ಸ್ವಲ್ಪ ದೂರ ನಡೆದ ಮೇಲೆ ಅವನಿಗೆ ಸುಸ್ತಾಯಿತು. ಒಂದು ಒಂಟೆಯ ಬೆನ್ನನ್ನೇರಿ ಕುಳಿತುಕೊಂಡು ಅವನು ಪ್ರಯಾಣ ಮುಂದುವರಿಸಿದನು. ಉಳಿದ ಒಂಟೆಗಳು ಹಿಂದೆ ಅನುಸರಿಸಿದವು. ಸ್ವಲ್ಪ ಹೊತ್ತಿನ ಮೇಲೆ ಎಲ್ಲಾ ಒಂಟೆಗಳು ಬರುತ್ತಿರುವವೊ ಇಲ್ಲವೊ ನೋಡಲು ಒಂಟೆಸವಾರನು ಹಿಂತಿರುಗಿ ಅವುಗಳನ್ನು ಎಣಿಸತೊಡಗಿದನು. ಒಂಬತ್ತೇ ಒಂಟೆಗಳಿದ್ದವು. ಒಂದು ಒಂಟೆ ಕಳೆದುಹೋಯಿತಲ್ಲ ಎಂದು ಅವನಿಗೆ ಕಳವಳ. ಒಂಟೆಯಿಂದ ಕೆಳಗಿಳಿದು, ಸುಮಾರು ಒಂದು ಮೈಲಿ ದೂರ ಹಿಂದಕ್ಕೆ ಹೋಗಿ ತಪ್ಪಿಸಿಕೊಂಡ ಒಂಟೆಗಾಗಿ ಹುಡುಕಿದನು. ನಿರಾಸೆಯಿಂದ ಹಿಂತಿರುಗಿ ಮತ್ತೊಮ್ಮೆ ಎಣಿಸಿದಾಗ ಹತ್ತು ಒಂಟೆಗಳಿದ್ದವು. ತಪ್ಪಿಸಿಕೊಂಡ ಒಂಟೆ ಈಗ ಬಂದಿದೆ ಎಂದು ಸಂತೋಷದಿಂದ ಮತ್ತೆ ಒಂದು ಒಂಟೆಯ ಬೆನ್ನೇರಿ ಪ್ರಯಾಣ ಮುಂದುವರಿಸಿದನು. ಇನ್ನು ಸ್ವಲ್ಪ ಮುಂದುವರಿದ ಮೇಲೆ ಮತ್ತೆ ಸಂದೇಹದಿಂದ ಹಿಂತಿರುಗಿ ಒಂಟೆಗಳನ್ನು ಎಣಿಸುತ್ತಾನೆ, ಒಂಬತ್ತೇ ಒಂಟೆಗಳಿವೆ! ಪುನಃ ಹಿಂದಕ್ಕೆ ಹೋಗಿ ಹುಡುಕುತ್ತಾನೆ, ಒಂಟೆ ಸಿಕ್ಕದೆ ಹಿಂತಿರುಗಿ ಬಂದು ಎಣಿಸುತ್ತಾನೆ, ಹತ್ತು ಒಂಟೆಗಳಿವೆ! ಏನಾಶ್ಚರ್ಯ! ಇದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಒಂದು ಒಂಟೆಯ ಬೆನ್ನೇರಿ ಪ್ರಯಾಣ ಮುಂದುವರಿಸಿದನು. ಹೀಗೆ ಮೂರು ನಾಲ್ಕು ಸಾರಿ ಆದ ಮೇಲೆ ಅವನ ವಿಚಾರಬುದ್ಧಿಗೆ ಒಂದು ಆಲೋಚನೆ ಹೊಳೆಯಿತು. ಒಂಟೆಯ ಮೇಲೆ ಹತ್ತಿ ಕುಳಿತುಕೊಂಡು ಒಂದು ಒಂಟೆಯನ್ನು ಕಳೆದುಕೊಳ್ಳುವುದಕ್ಕಿಂತ ನಡೆದುಕೊಂಡು ಹೋಗುವುದೇ ಒಳ್ಳೆಯದು ಎಂದು ಅವನು ಘನನಿರ್ಧಾರಕ್ಕೆ ಬಂದ.

ಹೀಗೆಯೇ ನಾವೂ ಕೂಡ ಅಂತರಂಗದ ಕಡೆ ಗಮನ ಹರಿಸದಿದ್ದರೆ ನಮ್ಮಲ್ಲಿರುವ ಸೌಲಭ್ಯಗಳನ್ನು ಕಳೆದುಕೊಳ್ಳುತ್ತೇವೆ. ಮನಸ್ಸೆಂಬ ಕುದುರೆಯನ್ನು ಪಳಗಿಸಿ ಅದನ್ನೇರಿ ಹಿಂದಕ್ಕೆ ತಿರುಗಿಯೂ ನೋಡದೆ ನಮ್ಮ ಆಧ್ಯಾತ್ಮಿಕ ಪ್ರಯಾಣವನ್ನು ಮುಂದುವರಿಸಬೇಕು. ಅದಕ್ಕೇ ಹೃದಯಾಂತರಾಳದಲ್ಲಿ ಮುಳುಗು ಎಂದು ಶ್ರೀರಾಮಕೃಷ್ಣರು ಹೇಳಿದುದು. ಅಲ್ಲಿ ಸುಖ ಶಾಂತಿ ನೆಮ್ಮದಿ ಆಧ್ಯಾತ್ಮಿಕ ಅನುಭವಗಳು ಇವೇ ಮುಂತಾದ ಅನರ್ಘ್ಯ ರತ್ನಗಳು ದೊರೆಯುತ್ತವೆ. ಇವನ್ನು ಬಿಟ್ಟು ಸುಖಶಾಂತಿಗಳನ್ನು ಹೊರಗಡೆ, ಅವು ಎಲ್ಲಿ ಇಲ್ಲವೊ ಅಲ್ಲಿ ಅರಸುತ್ತೇವೆ.

ಸರಿಯಾಗಿ ಕಣ್ಣು ಕಾಣದ ಹಣ್ಣು ಹಣ್ಣು ಮುದುಕಿಯೊಬ್ಬಳು ಸೂಜಿಯ ಕಣ್ಣಿಗೆ ದಾರವನ್ನು ಪೋಣಿಸುತ್ತಿದ್ದಳು. ಸೂಜಿ ಕೈತಪ್ಪಿ ಕೆಳಗೆ ಬಿತ್ತು. ಆಕೆ ಮುದುಕಿಯಾದರೂ ತುಂಬ ಬುದ್ಧಿವಂತಳು. ಅಷ್ಟು ವಯಸ್ಸಾಗಿದ್ದರೂ ಸ್ವಾವಲಂಬಿಯಾಗಿದ್ದಳು. ಅವಳು ಮನೆಯಿಂದ ಹೊರಗೆ ಬಂದು ರಸ್ತೆಯಲ್ಲಿ ಏನೋ ಹುಡುಕತೊಡಗಿದಳು. ರಸ್ತೆಯಲ್ಲಿ ಹೋಗವವರೊಬ್ಬರು "ಏನಜ್ಜಿ, ಹುಡುಕುತ್ತಿದ್ದೀಯೆ?" ಎಂದು ವಿಚಾರಿಸಿದಾಗ, "ಸೂಜಿ ಹುಡುಕುತ್ತಿದ್ದೇನೆ" ಎಂದಳು.

"ಅದು ಎಲ್ಲಿ ಕಳೆದುಹೋಯಿತು?"

"ಮನೆಯ ಒಳಗೆ."

"ಮತ್ತೆ ಅಲ್ಲಿ ಹುಡುಕದೆ ರಸ್ತೆಯಲ್ಲಿ ಹುಡುಕಿದರೆ ಸಿಗುತ್ತದೆಯೆ?"

"ಮನೆಯಲ್ಲಿ ಬೆಳಕು ಸಾಲದು ಎಂದು ಇಲ್ಲಿ ಹುಡುಕುತ್ತಿದ್ದೇನೆ."

ಹಾಗೆಯೇ ನಾವು ಸುಖಶಾಂತಿಗಳನ್ನು ಅವಿಲ್ಲದ ನೆಲೆಯಲ್ಲಿ ಹುಡುಕುತ್ತಿದ್ದೇವೆ. ಅಂತರಂಗದಲ್ಲಿ ಕತ್ತಲೆ ಇರುವುದು ನಿಜ. ಮನಸ್ಸೆಂಬ ಕನ್ನಡಿಯು ಪ್ರಾಪಂಚಿಕ ಧೂಳಿನಿಂದ ಮುಕ್ತವಾದರೆ ಅದು ಆತ್ಮದ ಬೆಳಕನ್ನು ಪ್ರತಿಬಿಂಬಿಸುತ್ತದೆ; ಆಗ ಅಂತರಂಗ ಬೆಳಗುತ್ತದೆ ಮತ್ತು ಸುಖಶಾಂತಿಗಳು ದೊರೆಯುತ್ತವೆ. ಸುಖವನ್ನು ಅರಸುವುದಲ್ಲ, ಅದು ಒಳಗಡೆಯಿಂದ ಸ್ಫುರಿಸಬೇಕು.

**"ವಿಷಯಿಯಲ್ಲಿ ಬದಲಾವಣೆಯುಂಟಾದರೆ ವಿಷಯವು ತಾನಾಗಿಯೇ ಬದಲಾಗುತ್ತದೆ"** ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅಂದರೆ ನಾವು ಹಳದಿ ಕನ್ನಡಕ ಹಾಕಿಕೊಂಡರೆ, ಜಗತ್ತು ಹಳದಿಯಾಗುತ್ತದೆ. ಕೆಂಪು ಕನ್ನಡಕ ಹಾಕಿಕೊಂಡಿದ್ದರೆ, ಕೆಂಪಾಗಿ ಕಾಣುತ್ತದೆ. ನೀವು ಮನಸ್ಸೆಂಬ ಕನ್ನಡಕವನ್ನು ಸ್ವಚ್ಛ ಮಾಡಿದರೆ, ಜಗತ್ತೆಲ್ಲ ಒಳಿತಾಗಿಯೇ ಕಾಣುತ್ತದೆ, ಅಲ್ಲವೇ?

(ಬರಹ: **ಸ್ವಾಮಿ ನಿತ್ಯಸ್ಥಾನಂದ**)